


ಎಡದಿಂದ ಬಲಕ್ಕೆ :

1. ಗೃಹವನ್ನು ನಿರ್ಮಿಸುವಾಗ ಅವನು ತೋರಿದ ಕೃಪೆ ಹೀಗೆ (4)
3. ಇಷ್ಟು ಬೇಗ ಮರ ಹತ್ತಿ ಇಳಿದನಲ್ಲ, ಎಂಥ ಶೂರ! (3)
4. ಜಹಜಿನಲ್ಲಿ ವಿಹಾರಕ್ಕೆ ಹೊರಟವಳದು ಗಂಗೆಯದೇ ಹೆಸರು (3)
6. ಎಷ್ಟು ಸ್ವಾರಸ್ಯಕರವಾಗಿದೆ ನೋಡಿ ಈ ದೇವಮಾನವ ಜೋಡಿ (4)
7. ಗೊಂಚಲಿನಲ್ಲಿರುವ ಎಲೆಗಳೆಲ್ಲ ತುಂಬ ಎಳೆಯವು (3)
9. ಮುಂದೆ ಬರುವವರನ್ನೆಲ್ಲ ಹೀಗೆ ತುಳಿದು ಹಾಕುವುದೇ ? (3)
11. ಕವಿರತ್ನನ ಬೆರಳುಗಳಲ್ಲಿರುವ ಉಗುರುಗಳನ್ನು ನೋಡಿದಿರಾ ? (3)
13. ಕಾಡಿನ ಮರದಡಿಯಲ್ಲಿ ಯವುದು ಈ ಪ್ರಾಣಿ ? (3)
15. ಕೆರೆಕಟ್ಟೆ ಏರುವಾಗಲೆಲ್ಲ ನೆನಪಾಗುತ್ತದೆ ಪ್ರಸಿದ್ಧ ನಕ್ಷತ್ರ ರಾಶಿ (4)
17. ಸಮಸ್ತ ಕೆಲಸಗಳಿಗೂ ಬೇಕೇ ಬೇಕು ತಲೆ (3)
18. ಸರಗಳ್ಳರನ್ನು ಹಿಡಿವ ಕೆಲಸ ಸುಲಭವಾದರೂ ಹಿಂದು ಮುಂದು (3)
19. ವ್ಯಸನವನ್ನು ದೂರವಾಗಿಸಲು ಹೀಗೆ ಅಡವಿ ಜೀವನವೇ ? (4)

ಮೇಲಿಂದ ಕೆಳಕ್ಕೆ :

1. ಆಸರೆ ನೀಡಬಲ್ಲ ಜನರನ್ನು ಬೇಗ ಹುಡುಕು(3)
2. ಹೊಸ ಜನರನ್ನೆಲ್ಲ ಗುಂಪುಗೂಡಿಸಲು ತಕ್ಕ ವಿಶಾಲ ಪಡಸಾಲೆ (3)
3. ಗುಡ್ಡ ಹತ್ತುವಾಗ ಕಂಡದ್ದು ಸಾಗರ ನೌಕೆಯೇ ಹೌದೇ ? (3)
5. ವಿಮಾನವನ್ನೇರುವ ಮೊದಲು ಸ್ವಲ್ಪ ಬಿಡುವು ಇರಲಿ (3)
7. ಚಿಂತನದ ಕಾರ್ಯವೇ ಆತನಿಗೆ ಶಾಶ್ವತ (4)
8. ಚಿಕೋರಿ ಬೆರೆಸಿದರೆ ನಾಲಿಗೆಗೆ ಹಿತವಾದೀತೇ ? (4)
9. ದೋಣಿಗಳನ್ನೆಲ್ಲ ಕಟ್ಟಿ ಹಾಕಿದವನೇ ಸೇನೆಯ ಮುಂದಾಳು (4)
10. ನಾಡನ್ನು ಎತ್ತಿ ಹಿಡಿವಂಥ ಮಾತು ಮತ್ತು ವರ್ತನೆ (4)
12. ಮುದುಕರನ್ನು ವಂಚಿಸುವಲ್ಲಿ ಈತ ಭಾರೀ ನಿಷ್ಣಾತ (3)
14. ಸಾಹುಕಾರನಾದೊಡನೆ ದೇವತೆಯಂತಿದ್ದವ ಕ್ರೂರಿಯಂತಾದ ! (3)
15. ವಿಕಾರವಾಗಿ ಕೇಕೆ ಹಾಕುತ್ತ ನಿಂತವ ಎಂಥ ಬೆಪ್ಪ ! (3)
16. ಕಳ್ಳರ ಕೈ ಸೇರಿತು ನೋಡಿ ಪೂಜಾ ಬಿಂದಿಗೆ (3)

## 12-07-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಮ್ಮತಿ 3. ವಿಫಲ 4. ರುಧಿರ 6. ಗುರುತಿಸು 7. ಜೊತೆಗಾರ 9. ಗೆಳೆತನ 11. ಅಕಾಲಿಕ 15. ಕರಾಳ 16. ಉಕ್ಕಾನು (= ನಷ್ಟ ) 17.ಗರುವ =ಗರ್ವ

ಮೇಲಿಂದ ಕೆಳಕ್ಕೆ :

1. ಸಲಹು ; 2. ತಿರುಪೆ 3. ವಿಕೃತಿ 5. ರಮ್ಯತೆ 6. ಗುಳಿಗೆ ; 8. ರಜಕ ; 10. ತವಕ ; 12. ಕಾನೂನು ; 13. ಕಾಳಗ ; 14. ಚೆಲುವ

ಪ್ರಶ್ನಾಂಕಣ

# ಹೂದಳದ ಜೇನು ಗೂಡು: ಹೇಗೆ?

ಅದು ಹೇಗೇ ಇರಲಿ, ಒಂದಂಶ ಸ್ಪಷ್ಟ : ಅದು ಪ್ರಕೃತಿಯ ಒಂದು ಪರಮ ವಿಸ್ಮಯದ ಸೃಷ್ಟಿ.

ಜೇನ್ನೊಣಗಳಲ್ಲಿ ಹಲವಾರು ವಂಶಗಳಿವೆ; ಒಟ್ಟು ಇಪ್ಪತ್ತು ಸಾವಿರ ಪ್ರಭೇದಗಳಿವೆ. ಅವುಗಳ ಒಂದೇ ಒಂದು ವಂಶದ ( ಏಪಿಸ್ ) ಏಳು ಪ್ರಭೇದಗಳು ಮಾತ್ರ "ರಾಣಿ"ಯ ನೇತೃತ್ವದಲ್ಲಿ ಬಹು ಕೊಠಡಿಗಳ ಮೇಣದ ಹುಟ್ಟನ್ನು ನಿರ್ಮಿಸಿ, ಮಕರಂದ ಸಂಗ್ರಹಿಸಿ, ಜೇನನ್ನಾಗಿ ಪರಿವರ್ತಿಸಿ ಶೇಖರಿಸುತ್ತವೆ.

ಜೇನ್ನೊಣಗಳ ಉಳಿದೆಲ್ಲ ಪ್ರಭೇದಗಳ ಶೇಕಡ ತೊಂಬತ್ತಕ್ಕೂ ಹೆಚ್ಚಿನವು ಸಂಘ ಜೀವನ ನಡೆಸುವುದಿಲ್ಲ. ತಮ್ಮ ಪಾಡಿಗೆ ತಾವು ಒಂಟೊಂಟಿಯಾಗಿಯೇ ಬಾಳುವ ಇಂಥವೆಲ್ಲ ಪ್ರಭೇದಗಳು ( ಅಂಥದೊಂದು ಪ್ರಭೇದ ಚಿತ್ರ1 ರಲ್ಲಿದೆ) ಜೇನು ಹುಟ್ಟನ್ನು ನಿರ್ಮಿಸುವುದಿಲ್ಲ ; ಜೇನನ್ನು ತಯಾರಿಸುವುದಿಲ್ಲ ; ಮೊಟ್ಟೆಗಳಿಗೆ ಕಾವಲು ನಿಂತು ರಕ್ಷಿಸಿ ಮರಿಮಾಡಿ ಪೋಷಿಸುವುದೂ ಇಲ್ಲ. ಆದರೂ, ಅವೆಲ್ಲ ಹೂಗಳಿಂದ ಮಕರಂದವನ್ನು ಹೀರುತ್ತವೆ ; ಪರಾಗವನ್ನು ಸೇವಿಸುತ್ತವೆ. ತನ್ಮೂಲಕ ಪರಾಗ ಸ್ಪರ್ಶಕ್ಕೆ ನೆರವನ್ನು ನೀಡುತ್ತವೆ. ಹಾಗಾಗಿ ಉಪಯುಕ್ತ ಕೀಟಗಳೇ ಆಗಿವೆ.

ಇಂತಹ "ಒಂಟಿ ಜೇನ್ನೊಣ"ಗಳ ಒಂದು ಬಗೆ 'ಮೇಸನ್ ಬೀ' ಗಳದು. ಅವುಗಳ ಒಂದು ಪ್ರಭೇದ 'ಆಸ್ಮಿಯಾ ಅವೊಸೆಟ್ಟಾ'ದ ಪ್ರೌಢ ಹೆಣ್ಣುಗಳು ತಮ್ಮ ಮೊಟ್ಟೆಯ ಮತ್ತು ಮರಿಹುಳುವಿನ ಶೈಶವ ಕಾಲದ ರಕ್ಷಣೆ ಮತ್ತು ಪೋಷಣೆಗೆ ವಿವಿಧ ಹೂವುಗಳ ದಳಗಳನ್ನು ಬಳಸಿ ಅತ್ಯಂತ ವಿಶಿಷ್ಟ ಬಗೆಯ ಗೂಡನ್ನು ಏಕಾಂಗಿಯಾಗಿ ನಿರ್ಮಿಸುತ್ತವೆ. ಅದೇ 'ಹೂದಳದ ಜೇನುಗೂಡು'.




ಮೊಟ್ಟೆ ಇಡುವ ಕಾಲಕ್ಕೆ ಎರಡು ದಿನ ಮೊದಲಿನಿಂದ ಈ ನಿರ್ಮಾಣ ಆರಂಭಗೊಳ್ಳುತ್ತದೆ. ಮೊದಲು ಈ ಜೇನ್ನೊಣ ಮೆತ್ತಗಿನ ನೆಲದಲ್ಲಿ ಮಣ್ಣನ್ನು ಬಗೆದು ಬಗೆದು ಸುಮಾರು ಎರಡು ಅಂಗುಲ ಆಳದ ಒಂದು ಗುಳಿಯನ್ನು ತೋಡುತ್ತದೆ. ನಂತರ ಸನಿಹದ ಗಿಡ ಮರಗಳಲ್ಲಿ ಅರಳಿ ನಿಂತ ಕುಸುಮಗಳ ದಳಗಳನ್ನು ಒಂದೊಂದನ್ನೇ ಕಿತ್ತು ತಂದು ಗುಳಿಯ ತಳಕ್ಕೆ ಮತ್ತು ಗೋಡೆಗೆ ಜೋಡಿಸುತ್ತದೆ. ಎರಡೆರಡು ದಳಗಳ ನಡುವೆ ಅಂಟು ಮಣ್ಣನ್ನು ಪೂಸಿ, ಗಟ್ಟಿಯಾಗಿ ಬಂಧಿಸಿ ರಚಿಸುವ ಬಹುಪದರಗಳ ಈ "ಕಟ್ಟಡ" ನೀರು ತೂರದಂತೆ, ಶತ್ರುಗಳು ಕೊರೆಯಲಾಗದಂತೆ ದೃಢವಾಗುತ್ತವೆ. ಹಾಗಾದ ನಂತರ ಜೇನ್ನೊಣ ಈ 'ಹೂವಿನ ಪೊಟ್ಟಣ'ದಲ್ಲಿ ಒಂದಷ್ಟು ಮಕರಂದ ಮತ್ತಷ್ಟು ಪರಾಗ ಕಣಗಳನ್ನು ಬೆರೆಸಿ, ಗಟ್ಟಿ ಪಾಯಸದಂತೆ ಕಲಸಿ ಅದರ ಮೇಲೆ ಒಂದು ಮೊಟ್ಟೆಯನ್ನು ಪ್ರಸವಿಸುತ್ತದೆ ; ಗೂಡಿನ ಮೇಲ್ಭಾಗಕ್ಕೆ ಗೋಡೆಯ ಹೂದಳಗಳನ್ನೇ ಬಾಗಿಸಿ ಭದ್ರ ಚಾವಣಿಯನ್ನಾಗಿಸಿ ಅಲ್ಲಿಂದ ದೂರವಾಗುತ್ತದೆ ( ಅಂಥ ಮೂರು ವಿಭಿನ್ನ ಗೂಡುಗಳು ಚಿತ್ರ2 ರಲ್ಲಿವೆ ). ಅದರ ಜೀವನವೂ ಅಲ್ಲಿಗೇ ಅಂತ್ಯಗೊಳ್ಳುತ್ತದೆ. ಕೆಲ ದಿನಗಳಲ್ಲೇ ಮೊಟ್ಟೆಯಿಂದ ಹೊರಬರುವ ಮರಿಹುಳು (ಲಾರ್ವಾ) ಅದರ ತಾಯಿ ದಾಸ್ತಾನಿಟ್ಟಿದ್ದ ಪೋಷಕಾಂಶಭರಿತ 'ಪಾಯಸ'ವನ್ನೇ ಸೇವಿಸುತ್ತ ಪ್ರೌಢವಾಗುತ್ತದೆ; ಗೂಡಿನ ಚಾವಣಿಯನ್ನು ಕೊರೆದು ಹೊರಬರುತ್ತದೆ!

ಎಂಥ ಸೋಜಿಗ, ಎಷ್ಟು ಅದ್ಭುತ ! ಅಲ್ಲವೇ?

■ ಎನ್. ವಾಸುದೇವ್